ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

## ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ನಡವಳಿಗಳು.

ವಿಷಯ:- ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಲಿಖಿತ ಪರೀಕ್ಷೆಯಲ್ಲಿ ದುರ್ನಡತೆ ಎಸಗಿರುವ ಶ್ರೀ ಮಂಜು ನಿಂಗಪ್ಪ ಕಟ್ಟೀಕರ್ ಎಂಬ ಅಭ್ಯರ್ಥಿಯನ್ನು ಮುಂದಿನ ಪರೀಕ್ಷೆಗಳಿಗೆ ನಿಷೇಧಿಸುವ ಬಗ್ಗೆ.

ಉಲ್ಲೇಖ:- 1) ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 126/2020 ಕಲಂ, 465, 468, 471, 420 ಐಪಿಸಿ.
2) ಆರಕ್ಷಕ ನಿರೀಕ್ಷಕರು, ನಗರ ಅಪರಾಧ ವಿಭಾಗ, (ಸಿಸಿಬಿ), ಬೆಳಗಾವಿ ನಗರ ರವರ ಪತ್ರ ಸಂಖ್ಯೆ: /2020 ದಿನಾಂಕ: 05.11.2020.

ಪ್ರಸ್ತಾವನೆ:-

ಅಧಿಸೂಚನೆ ಸಂಖ್ಯೆ: 03/ನೇಮಕಾತಿ-4/2020-21 ದಿನಾಂಕ:07.05.2020 (ಎನ್‌ಕೆಕೆ) (1005 ಹುದ್ದೆಗಳು) ಮತ್ತು 14/ನೇಮಕಾತಿ-4/2019-20 ದಿನಾಂಕ:23.04.2020 (ಕೆಕೆ) (444 ಹುದ್ದೆಗಳು) ರನ್ವಯ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ) ಹುದ್ದೆಗಳಿಗೆ ದಿನಾಂಕ: 18.10.2020 ರಂದು ಲಿಖಿತ ಪರೀಕ್ಷೆಯನ್ನು ರಾಜ್ಯಾದ್ಯಂತ ವಿವಿಧ ಕೇಂದ್ರಗಳಲ್ಲಿ ನಡೆಸಲಾಗಿರುತ್ತದೆ.

ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ) (ಎನ್‌ಕೆಕೆ-1005 & ಕೆಕೆ-444) ಹುದ್ದೆಗೆ ಸಂಬಂಧಿಸಿದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ ದಿನಾಂಕ: 18.10.2020 ರಂದು ಜೈನ್ ಇಂಜಿನಿಯರಿಂಗ್ ಕಾಲೇಜ್, ಟಿ.ಪಿ, ನಗರ, ಮಚ್ಚೆ ಬೆಳಗಾವಿ ಪರೀಕ್ಷಾ ಕೇಂದ್ರದ ಕೊಠಡಿ ಸಂಖ್ಯೆ: 19 ರಲ್ಲಿನ ಪರಿವೀಕ್ಷಕರು ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಪರಿಶೀಲಿಸಿ ಅಭ್ಯರ್ಥಿಗಳ ನಾಮಿನಲ್ ರೋಲ್ ಮತ್ತು ಸಹಿಯನ್ನು ಪಡೆಯುವ ವೇಳೆಯಲ್ಲಿ ಅರ್ಜಿ ಸಂಖ್ಯೆ: 8745408 ನೇ ಅಭ್ಯರ್ಥಿಯ ನಾಮಿನಲ್ ರೋಲ್ ನಲ್ಲಿರುವ ಭಾವಚಿತ್ರ ಮತ್ತು ಸಹಿಯು, ಒಂದಕ್ಕೊಂದು ತಾಳೆಯಾಗದ ಹಿನ್ನೆಲೆಯಲ್ಲಿ ಅಭ್ಯರ್ಥಿಗೆ ವಿಚಾರಿಸಿದಾಗ, ತನ್ನ ಹೆಸರು ಮಂಜು ನಿಂಗಪ್ಪ ಕಟ್ಟೀಕರ್ ಆಗಿದ್ದು, ತನ್ನ ಹೆಸರಿನ ಮೇಲೆ ಒಬ್ಬನ ಫೋಟೋ ಹಾಕಿಸಿ ಮತ್ತು ಸಹಿಯನ್ನು ಸಹ ಮಾಡಿಸಿ ಸದರಿ ನೇಮಕಾತಿಯ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆದರೆ ಆ ಅಭ್ಯರ್ಥಿಯು ಲಿಖಿತ ಪರೀಕ್ಷೆಯನ್ನು ಬರೆಯಲು ಬಂದಿರುವುದಿಲ್ಲ. ಆದ ಕಾರಣ ಲಿಖಿತ ಪರೀಕ್ಷೆಯ ಪ್ರವೇಶ ಪತ್ರಕ್ಕೆ ತನ್ನ ಫೋಟೋ ಹಾಕಿ, ಸಹಿ ಮಾಡಿ ಪರೀಕ್ಷೆಯನ್ನು ಬರೆಯಲು ಹಾಜರಾಗಿರುತ್ತೇನೆ ಎಂದು ಹೇಳಿಕೆಯನ್ನು ನೀಡಿರುತ್ತಾನೆ. ಈ ಸಂಬಂಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 126/2020 ಕಲಂ, 465, 468, 471, 420 ಐಪಿಸಿ. ರೀತ್ಯಾ ಅಪರಾಧ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಭಾಗಿಯಾದ ಅಭ್ಯರ್ಥಿಯ ವಿವರವು ಈ ಕೆಳಕಂಡಂತಿದೆ.

| ಕ್ರ.ಸ. | ಅರ್ಜಿ ಸಂಖ್ಯೆ/ ನೊಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು | ವಿಳಾಸ |
|---|---|---|---|
| 1 | ಅ.ಸಂ.9161595<br>ಅ.ಸಂ.9077401<br>ನೊ.ಸಂ.8745408 | ಶ್ರೀ ಮಂಜು ನಿಂಗಪ್ಪ ಕಟ್ಟೀಕರ್ | ಮಾವಿನಮುರಿ ತೋಟ, ರಜಪುರ್ ಪೋಸ್ಟ್, ಗೋಕಾಕ್ ತಾಲ್ಲೂಕ್, ಬೆಳಗಾವಿ ಜಿಲ್ಲೆ 591224. |

ಸದರಿ ನೇಮಕಾತಿ ಅಧಿಸೂಚನೆ ಸಂಖ್ಯೆ: 03/ನೇಮಕಾತಿ-4/2020-21 (ಎನ್‌ಕೆಕೆ) & 14/ನೇಮಕಾತಿ-4/2019-20 (ಕೆಕೆ) ರಲ್ಲಿ ಕ್ರಮ ಸಂಖ್ಯೆ: (ಎನ್‌ಕೆಕೆ) 18 (S) ಮತ್ತು (ಕಲ್ಯಾಣ ಕರ್ನಾಟಕ) 19 (S) ರ ವಿಶೇಷ ಸೂಚನೆಗಳ ಅಡಿಯಲ್ಲಿ ದುರ್ನಡತೆ ಶೀರ್ಷಿಕೆಯಡಿ ಈ ಕೆಳಗಿನಂತೆ ಸೂಚನೆ ನೀಡಲಾಗಿರುತ್ತದೆ.

. . . . 2

"ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ ಅಥವಾ ಒಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗಳಿಗೆ ಹಾಜರಾಗಿರುವ ವಿಷಯವನ್ನು ಮರೆಮಾಚಿ ಮತ್ತೊಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗೆ ಹಾಜರಾದರೆ ಹಾಗೂ ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು" ಎಂದು ತಿಳಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಹಾಗೂ ಅಧಿಸೂಚನೆಯಲ್ಲಿನ ನಿಬಂಧನೆಗಳನ್ನು ಪರಿಶೀಲಿಸಿ, ನೇಮಕಾತಿ ಕಛೇರಿಯ ಮುಖ್ಯಸ್ಥರಾದ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, (ನೇಮಕಾತಿ) ಆದ ನಾನು ಈ ಕೆಳಕಂಡಂತೆ ಆದೇಶಿಸುತ್ತೇನೆ.

**ಆದೇಶ ಸಂಖ್ಯೆ: 03/ನೇಮಕಾತಿ-4/2020-21, ದಿನಾಂಕ:18.11.2020**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ) ಹುದ್ದೆಗೆ ಅರ್ಜಿ ಸಲ್ಲಿಸಲಾದ ಶ್ರೀ ಮಂಜು ನಿಂಗಪ್ಪ ಕಟ್ಟೀಕರ್ ಎಂಬ ಅಭ್ಯರ್ಥಿಯು ಅಕ್ರಮವಾಗಿ ನೇಮಕಾತಿ ಪಡೆಯುವ ಸಲುವಾಗಿ ಸದರಿ ಹುದ್ದೆಗೆ ಅನ್-ಲೈನ್ ನಲ್ಲಿ ಅರ್ಜಿ ಸಲ್ಲಿಸುವಾಗ ಈತನ ಬದಲಿಗೆ ಬೇರೊಬ್ಬ ಅಭ್ಯರ್ಥಿ ಭಾವ ಚಿತ್ರ ಹಾಗೂ ಸಹಿ ಮಾಡಿ ಅರ್ಜಿ ಸಲ್ಲಿಸಿರುತ್ತಾನೆ. ಆದರೆ ಆ ಅಭ್ಯರ್ಥಿಯು ಲಿಖಿತ ಪರೀಕ್ಷೆಯನ್ನು ಬರೆಯಲು ಬಂದಿರುವುದಿಲ್ಲ. ಆದ ಕಾರಣ ಲಿಖಿತ ಪರೀಕ್ಷೆಯ ಪ್ರವೇಶ ಪತ್ರಕ್ಕೆ ತನ್ನ ಫೋಟೊ ಹಾಕಿ, ಸಹಿ ಮಾಡಿ ಪರೀಕ್ಷೆಯನ್ನು ಬರೆಯಲು ಹಾಜರಾಗಿರುತ್ತೇನೆ ಎಂದು ಹೇಳಿಕೆಯನ್ನು ನೀಡಿರುತ್ತಾನೆ. ಈ ಸಂಬಂಧ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 126/2020 ಕಲಂ, 465, 468, 471, 420 ಐಪಿಸಿ. ಪ್ರಕಾರ ಪ್ರಕರಣ ದಾಖಲಾಗಿರುತ್ತದೆ. ಇಂತಹ ದುರ್ನಡತೆ ಎಸಗಿರುವ ಶ್ರೀ ಮಂಜು ನಿಂಗಪ್ಪ ಕಟ್ಟೀಕರ್ ಎಂಬ ಅಭ್ಯರ್ಥಿಯನ್ನು (ನೊಂದಣಿ ಸಂಖ್ಯೆ: 8745408) ಪೊಲೀಸ್ ಇಲಾಖೆಯು ನಡೆಸುವ ಎಲ್ಲಾ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗಳಿಗೆ ಖಾಯಂ ಆಗಿ ಡಿಬಾರ್ ಮಾಡಲಾಗಿದೆ **(Permanently Debarred).**

**(ಅಮ್ರಿತ್ ಪಾಲ್, ಐಪಿಎಸ್)**
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ, ಬೆಂಗಳೂರು

ಗೆ,

ಶ್ರೀ ಮಂಜು ನಿಂಗಪ್ಪ ಕಟ್ಟೀಕರ್, ಮಾವಿನಮುರಿ ತೋಟ, ರಜಪುರ್ ಪೋಸ್ಟ್, ಗೋಕಾಕ್ ತಾಲ್ಲೂಕು, ಬೆಳಗಾವಿ ಜಿಲ್ಲೆ- 591224.

ಪ್ರತಿಯನ್ನು:-

1) ಪೊಲೀಸ್ ಆಯುಕ್ತರು, ಬೆಳಗಾವಿ ನಗರ, ಬೆಳಗಾವಿ ರವರಿಗೆ.
2) ಎಲ್ಲಾ ಘಟಕಾಧಿಕಾರಿಗಳಿಗೆ ಮಾಹಿತಿಗಾಗಿ.

ಪ್ರತಿಯನ್ನು ಮಾಹಿತಿಗಾಗಿ ಅಭಿನಂದನೆಗಳೊಂದಿಗೆ:-

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.

ಕರ್ನಾಟಕ ಸರ್ಕಾರ
ಪೊಲೀಸ್ ಇಲಾಖೆ

**ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು ರವರ ನಡವಳಿಗಳು.**

ವಿಷಯ:– ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಲಿಖಿತ ಪರೀಕ್ಷೆಯಲ್ಲಿ ದುರ್ನಡತೆ ಎಸಗಿರುವ ಶ್ರೀ ರೋಹನ ಶಂಕರ್ ಜೋಡಟ್ಟಿ ಎಂಬ ಅಭ್ಯರ್ಥಿಯನ್ನು ಮುಂದಿನ ಪರೀಕ್ಷೆಗಳಿಗೆ ನಿಷೇಧಿಸುವ ಬಗ್ಗೆ.

ಉಲ್ಲೇಖ:– 1) ಬೆಳಗಾವಿ ನಗರ ತಿಲಕವಾಡಿ ಪೊಲೀಸ್ ಠಾಣೆಯ ಅಪರಾಧ ಸಂಖ್ಯೆ: 66/2020 ಕಲಂ, 419, 420 ಐಪಿಸಿ.
2) ವೃತ್ತ ಆರಕ್ಷಕ ನಿರೀಕ್ಷಕರು, ಮೂಡಲಗಿ ಸರ್ಕಲ್, ಬೆಳಗಾವಿ ಜಿಲ್ಲೆ ರವರ ವರದಿ ದಿನಾಂಕ: 18.10.2020.
3) ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ ರವರ ಪತ್ರ ಸಂಖ್ಯೆ: ಸಿಬ್ಬಂದಿ/ನೇಮಕಾತಿ/ಎಪಿಸಿ/278/2020 ದಿನಾಂಕ: 18.10.2020.

ಪ್ರಸ್ತಾವನೆ:–

ಅಧಿಸೂಚನೆ ಸಂಖ್ಯೆ: 03/ನೇಮಕಾತಿ–4/2020–21 ದಿನಾಂಕ:07.05.2020 (ಎನ್‌ಕೆಕೆ) (1005 ಹುದ್ದೆಗಳು) ಮತ್ತು 14/ನೇಮಕಾತಿ–4/2019–20 ದಿನಾಂಕ:23.04.2020 (ಕೆಕೆ) (444 ಹುದ್ದೆಗಳು) ರನ್ವಯ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ) ಹುದ್ದೆಗಳಿಗೆ ದಿನಾಂಕ: 18.10.2020 ರಂದು ಲಿಖಿತ ಪರೀಕ್ಷೆಯನ್ನು ರಾಜ್ಯಾದ್ಯಂತ ವಿವಿಧ ಕೇಂದ್ರಗಳಲ್ಲಿ ನಡೆಸಲಾಗಿರುತ್ತದೆ.

ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ) (ಎನ್‌ಕೆಕೆ–1005 & ಕೆಕೆ–444) ಹುದ್ದೆಗೆ ಸಂಬಂಧಿಸಿದ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆ ದಿನಾಂಕ: 18.10.2020 ರಂದು ಕೆ.ಎಲ್.ಎಸ್ ಶ್ರೀ ವಸಂತರಾವ್ ಪೋಟ್‌ದಾರ್ ಪಾಲಿಟೆಕ್ನಿಕ್ ಕೆಎಲ್‌ಎಸ್ ಕ್ಯಾಂಪಸ್, ತಿಲಕವಾಡಿ, ಬೆಳಗಾವಿ ಪರೀಕ್ಷಾ ಕೇಂದ್ರದ ಬ್ಲಾಕ್ ನಂ. 5 ರಲ್ಲಿ ಶ್ರೀ ರೋಹನ ಶಂಕರ್ ಜೋಡಟ್ಟಿ ಸಾ: ಮಲ್ಲಾಪೂರ ಪಿ.ಜಿ, ತಾ: ಗೋಕಾಕ ನೊಂದಣಿ ಸಂಖ್ಯೆ: 8735501 ಅರ್ಜಿ ಸಂಖ್ಯೆ: 9703650 ಅವನ ಬದಲಾಗಿ ಆರೋಪಿ ಶ್ರೀ ಕೃಷ್ಣಾ ರಾಮಚಂದ್ರ ಐಹೊಳೆ ವಯಸ್ಸು 21 ವರ್ಷ ಮಲ್ಲಾಪೂರ ಪಿ.ಜಿ. (ದುರದುಂಡಿ) ತಾ: ಗೋಕಾಕ ಎಂಬುವವರು ಪರೀಕ್ಷೆಯನ್ನು ಬರೆಯುತ್ತಿರುವಾಗ ಸಿಕ್ಕಿಬಿದ್ದಿದ್ದು, ಅವರ ಮೇಲೆ ಮತ್ತು ಶ್ರೀ ರೋಹನ ಶಂಕರ್ ಜೋಡಟ್ಟಿ ಮೇಲೆ ತಿಲಕವಾಡಿ ಪೊಲೀಸ್ ಠಾಣೆ, ಬೆಳಗಾವಿ ನಗರ ಅಪರಾಧ ಸಂಖ್ಯೆ: 66/2020 ಕಲಂ, 419, 420 ಐಪಿಸಿ ರೀತ್ಯಾ ಅಪರಾಧ ಪ್ರಕರಣ ದಾಖಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಭಾಗಿಯಾದ ಅಭ್ಯರ್ಥಿಯ ವಿವರವು ಈ ಕೆಳಕಂಡಂತಿದೆ.

| ಕ್ರ.ಸ. | ಅರ್ಜಿ ಸಂಖ್ಯೆ/ ನೊಂದಣಿ ಸಂಖ್ಯೆ | ಅಭ್ಯರ್ಥಿಯ ಹೆಸರು | ವಿಳಾಸ |
|---|---|---|---|
| 1 | ಅ.ಸಂ.9703650 ನೊ.ಸಂ.8735501 | ಶ್ರೀ ರೋಹನ ಶಂಕರ್ ಜೋಡಟ್ಟಿ | ಮಲ್ಲಾಪೂರ ಪಿ.ಜಿ, ಗೋಕಾಕ ತಾಲೂಕು, ಬೆಳಗಾವಿ ಜಿಲ್ಲೆ |

ಸದರಿ ನೇಮಕಾತಿ ಅಧಿಸೂಚನೆ ಸಂಖ್ಯೆ: 03/ನೇಮಕಾತಿ–4/2020–21 (ಎನ್‌ಕೆಕೆ) & 14/ನೇಮಕಾತಿ–4/2019–20 (ಕೆಕೆ) ರಲ್ಲಿ ಕ್ರಮ ಸಂಖ್ಯೆ: (ಎನ್‌ಕೆಕೆ) 18 (S) ಮತ್ತು (ಕಲ್ಯಾಣ ಕರ್ನಾಟಕ) 19 (S) ರ ವಿಶೇಷ ಸೂಚನೆಗಳ ಅಡಿಯಲ್ಲಿ ದುರ್ನಡತೆ ಶೀರ್ಷಿಕೆಯಡಿ ಈ ಕೆಳಗಿನಂತೆ ಸೂಚನೆ ನೀಡಲಾಗಿರುತ್ತದೆ.

"ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಪರೀಕ್ಷಾ ಕೊಠಡಿಯಲ್ಲಿ ದುರ್ವರ್ತಿಸುತ್ತಿರುವನೆಂದು, ತಪ್ಪಿತಸ್ಥನೆಂದು ಕಂಡುಬಂದಲ್ಲಿ ಅಥವಾ ಒಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗಳಿಗೆ ಹಾಜರಾಗಿರುವ ವಿಷಯವನ್ನು ಮರೆಮಾಚಿ ಮತ್ತೊಂದು ಕೇಂದ್ರದಲ್ಲಿ ದೈಹಿಕ ಪರೀಕ್ಷೆಗೆ ಹಾಜರಾದರೆ ಹಾಗೂ ನೇಮಕಾತಿ ಸಮಿತಿಯಿಂದ ನೀಡಲಾದ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡಬಂದಲ್ಲಿ ಅಭ್ಯರ್ಥಿಯು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ನೇಮಕಾತಿ ಸಮಿತಿ ನಡೆಸುವ ಯಾವುದೇ ಪರೀಕ್ಷೆಗೆ ಪ್ರವೇಶ ಪಡೆಯುವುದರಿಂದ ಅಥವಾ ಯಾವುದೇ ಹುದ್ದೆಯ ಆಯ್ಕೆಗೆ <u>ಖಾಯಂ ಆಗಿ ಡಿಬಾರ್ ಮಾಡಲಾಗುವುದು"</u> ಎಂದು ತಿಳಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಹಾಗೂ ಅಧಿಸೂಚನೆಯಲ್ಲಿನ ನಿಬಂಧನೆಗಳನ್ನು ಪರಿಶೀಲಿಸಿ, ನೇಮಕಾತಿ ಕಛೇರಿಯ ಮುಖ್ಯಸ್ಥರಾದ ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, (ನೇಮಕಾತಿ) ಆದ ನಾನು ಈ ಕೆಳಕಂಡಂತೆ ಆದೇಶಿಸುತ್ತೇನೆ.

**<u>ಆದೇಶ ಸಂಖ್ಯೆ: 03/ನೇಮಕಾತಿ-4/2020-21, ದಿನಾಂಕ: 18.11.2020</u>**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ) ಹುದ್ದೆಗೆ ಅರ್ಜಿ ಸಲ್ಲಿಸಲಾದ ಶ್ರೀ ರೋಹನ ಶಂಕರ್ ಜೋಡೆಟ್ಟಿ, ಅರ್ಜಿ ಸಂಖ್ಯೆ: 9703650 ಎಂಬ ಅಭ್ಯರ್ಥಿಯ ಬದಲಾಗಿ ಶ್ರೀ ಕೃಷ್ಣಾ ರಾಮಚಂದ್ರ ಐಹೊಳೆ ಎಂಬುವವರು ಲಿಖಿತ ಪರೀಕ್ಷೆಯನ್ನು ಬರೆಯುತ್ತಿರುವಾಗ ಸಿಕ್ಕಿಬಿದ್ದಿದ್ದು, ಅವರ ಮೇಲೆ ಮತ್ತು ಅಭ್ಯರ್ಥಿಯಾದ ಶ್ರೀ ರೋಹನ ಶಂಕರ್ ಜೋಡೆಟ್ಟಿ ಮೇಲೆ ತಿಲಕವಾಡಿ ಪೊಲೀಸ್ ಠಾಣೆ, ಬೆಳಗಾವಿ ನಗರ ಅಪರಾಧ ಸಂಖ್ಯೆ: 66/2020 ಕಲಂ, 419, 420 ಐಪಿಸಿ ರೀತ್ಯಾ ಅಪರಾಧ ಪ್ರಕರಣ ದಾಖಲಾಗಿರುತ್ತದೆ. ಇಂತಹ ದುರ್ನಡತೆ ಎಸಗಿರುವ ಶ್ರೀ ರೋಹನ ಶಂಕರ್ ಜೋಡೆಟ್ಟಿ ಎಂಬ ಅಭ್ಯರ್ಥಿಯನ್ನು (ಅರ್ಜಿ ಸಂಖ್ಯೆ: 9703650) (ನೊಂದಣಿ ಸಂಖ್ಯೆ: 8735501) ಪೊಲೀಸ್ ಇಲಾಖೆಯು ನಡೆಸುವ ಎಲ್ಲಾ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇಮಕಾತಿಗಳಿಗೆ ಖಾಯಂ ಆಗಿ ಡಿಬಾರ್ ಮಾಡಲಾಗಿದೆ **(Permanently Debarred).**

(ಅಮ್ರಿತ್ ಪಾಲ್, ಐಪಿಎಸ್)
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ, ಬೆಂಗಳೂರು

ಗೆ,

ಶ್ರೀ ರೋಹನ ಶಂಕರ್ ಜೋಡೆಟ್ಟಿ, ಮಲ್ಲಾಪೂರ ಪಿ.ಜಿ, ಗೋಕಾಕ ತಾಲೂಕು, ಬೆಳಗಾವಿ ಜಿಲ್ಲೆ.

<u>ಪ್ರತಿಯನ್ನು:-</u>

1) ಪೊಲೀಸ್ ಅಧೀಕ್ಷಕರು, ಬೆಳಗಾವಿ ಜಿಲ್ಲೆ.
2) ಎಲ್ಲಾ ಘಟಕಾಧಿಕಾರಿಗಳಿಗೆ ಮಾಹಿತಿಗಾಗಿ.

<u>ಪ್ರತಿಯನ್ನು ಮಾಹಿತಿಗಾಗಿ ಅಭಿನಂದನೆಗಳೊಂದಿಗೆ:-</u>

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ, ಬೆಂಗಳೂರು.